# ಕ್ರೋಮ್‌ಗೆ ಜಿಯೊ ಮತ್ತೆ ಸೆಡ್ಡು!

■ ಶಶಿಕುಮಾರ ಸಿ.

ಸ್ವದೇಸಿ ಬ್ರೌಸರ್ ಆಗಿ ಈಚೆಗಷ್ಟೇ ಬಳಕೆಗೆ ಬಂದಿರುವ ಜಿಯೊ ಪೇಜಸ್ ವೆಬ್ ಬ್ರೌಸರ್ ಹೊಸ ಅಪ್ಡೇಟ್ ವರ್ಶನ್ ಅನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಹೊಸ ಫೀಚರ್ಸ್ ಗೂಗಲ್‌ನ ಕ್ರೋಮ್‌ಗೆ ಸೆಡ್ಡು ಹೊಡೆಯುವಂತಿವೆ.

ಗೂಗಲ್ ಕ್ರೋಮ್‌ಗೆ ಪ್ರತಿಸ್ಪರ್ಧಿಯಾಗ ಹೊರಟಿರುವ ಜಿಯೊ ಆ ನಿಟ್ಟಿನಲ್ಲಿ ಜಿಯೊ ಪೇಜಸ್ 2.0.1 ವೆಬ್ ಬ್ರೌಸರ್ ವರ್ಶನ್ ಅನ್ನು ಬಿಡುಗಡೆ ಮಾಡಿದೆ. ಅದರಲ್ಲಿ ನ್ಯಾವಿಗೇಷನ್ ಮತ್ತು ಎಕ್ಸಿಟ್ ಬಟನ್, ಶಾರ್ಟ್ ವಿಡಿಯೊಗೆ ಬೆಂಬಲ ಮತ್ತು ಎಂಜಿನಿಯರಿಂಗ್ ಟೂಲ್‌ಗಳನ್ನು ಪರಿಚಯಿಸಿದೆ. ಈ ಫೀಚರ್ಸ್‌ಗಳನ್ನ ಬಳಸಲು ಸೆಟ್ಟಿಂಗ್ಸ್, ಇನ್ಸಟಂಟ್ ಸೆಟ್ಟಿಂಗ್ಸ್ ಅನ್ನು ಟ್ಯಾಪ್ ಮಾಡಬೇಕಾಗುತ್ತದೆ. ಇನ್ನು ಆ್ಯಡ್ರಾಯ್ಡ್ ಫೋನ್‌ಗಳಲ್ಲಿ ಈ ಹೊಸ ಅಪ್‌ಡೇಟ್ ಲಭ್ಯವಿದೆ.

ಡಕ್ ಡಕ್ ಗೋ: ಜಿಯೊ ಪೇಜಸ್‌ನ ಹೊಸ ಅಪ್‌ಡೇಟ್‌ನಲ್ಲಿ ಲಭ್ಯವಿರುವ ಹೊಸ ಫೀಚರ್ಸ್‌ಗಳಲ್ಲಿ ಡಕ್ ಡಕ್ ಗೋ ಸರ್ಚ್ ಎಂಜಿನ್ ಕೂಡ ಒಂದು. ಇದರಿಂದ ನೀವು ಪೂರ್ವನಿಯೋಜಿತವಾಗಿ ಡಕ್ ಡಕ್ ಗೋ ಸರ್ಚ್ ಎಂಜಿನ್ ಆಯ್ಕೆ ಮಾಡಬಹುದು. ಇದು ಬಳಕೆದಾರರ ಮಾಹಿತಿಯನ್ನು ಲಾಗ್ ಮಾಡದ ಕಾರಣ ಮತ್ತು ಹೆಚ್ಚು ಅಗತ್ಯವಿದ್ದಾಗ ಮಾತ್ರ ಕುಕೀಗಳನ್ನು ಬಳಸುವುದರಿಂದ ಇದು ಹೆಚ್ಚು ಸುರಕ್ಷಿತವಾಗಿರಲಿದೆ.

ಜಿಯೊ ಪೇಜಸ್‌ನಲ್ಲಿ ಕೆಳಗಿನ ಬಲ ಹ್ಯಾಂಬರ್ಗರ್ ಐಕಾನ್ ಸೆಟ್ಟಿಂಗ್ಸ್ ಇನ್ಸಟಂಟ್




ಸೆಟ್ಟಿಂಗ್ಸ್ ಸರ್ಚ್ ಎಂಜಿನ್ ಅನ್ನು ನ್ಯಾವಿಗೇಟ್ ಮಾಡುವ ಮೂಲಕ ನೀವು ಈ ಸರ್ಚ್ ಎಂಜಿನ್ ಅನ್ನು ಆಯ್ಕೆ ಮಾಡಬಹುದು.

ಶಾರ್ಟ್ ವಿಡಿಯೊ: ಶಾರ್ಟ್ ವಿಡಿಯೊ ಹೆಸರೇ ಸೂಚಿಸುವಂತೆ ಜಿಯೊ ಪೇಜಸ್ ಬಳಕೆದಾರರು ಈಗ 30 ಸೆಕೆಂಡ್‌ಗಳ ಅವಧಿಯ ಕಿರು ವಿಡಿಯೊಗಳನ್ನು ವೀಕ್ಷಿಸಬಹುದು. ಇದು ಮೀಸಲಾದ ವಿಭಾಗದಲ್ಲಿ ಲಭ್ಯವಿರುತ್ತದೆ. ಮನರಂಜನೆ, ತಂತ್ರಜ್ಞಾನ, ಜೀವನಶೈಲಿ, ಪ್ರಯಾಣ ಮತ್ತು ಹೆಚ್ಚಿನವುಗಳನ್ನು ಒಳಗೊಂಡಂತೆ ವಿವಿಧ ವಿಭಾಗಗಳಿಂದ ಈ ವಿಡಿಯೊಗಳನ್ನ ವೀಕ್ಷಿಸಬಹುದಾಗಿದೆ. ಇನ್ನು ಈ ವೀಡಿಯೊಗೆ ಹೋಗಲು, ಜಿಯೊ ಪೇಜಸ್‌ನ ಕೆಳಭಾಗದಲ್ಲಿರುವ ಎಕ್ಸಪ್ಲೋರ್ ಸೆಕ್ಷನ್ ಸ್ಕ್ರಾಲ್ ಟು ಶಾರ್ಟ್ ವಿಡಿಯೋಸ್ ರೀಲ್ ವ್ಯೂ ಮೋರ್ ಬಳಸಬೇಕು.

ಎಕ್ಸಿಟ್ ಬಟನ್ಸ್: ಇನ್ನು ಜಿಯೋ ಪೇಜಸ್‌ನಲ್ಲಿ ಈ ಭಾರಿ ಹೊಸದಾಗಿ ಎಕ್ಸಿಟ್ ಬಟನ್ಸ್ ಅನ್ನು ಪರಿಚಯಿಸಲಾಗಿದೆ. ಇನ್ನು, ಎಕ್ಸಿಟ್ ಬಟನ್ ಮೂಲಕ ನೀವು ಅಪ್ಲಿಕೇಶನ್‌ನಿಂದ ತ್ವರಿತವಾಗಿ ನಿರ್ಗಮಿಸಲು ಸಾಧ್ಯವಾಗುತ್ತದೆ. ನ್ಯಾವಿಗೇಷನ್ ಬಟನ್ಸ್ ಜಿಯೋ ಪೇಜ್‌ಗಳ ಒಳಗೆ ಹಿಂದಕ್ಕೆ ಮತ್ತು ಮುಂದಕ್ಕೆ ಚಲಿಸಲು ನಿಮಗೆ ಸಹಾಯ ಮಾಡುತ್ತದೆ. ತಲುಪಿಸುವ ಭರವಸೆ ನೀಡಿದೆ. ಸಂಸ್ಥೆಯು ಇದನ್ನು ಮೇಡ್‌ಇನ್ ಇಂಡಿಯಾ ಬ್ರೌಸರ್‌ನಂತೆ ಮಾರಾಟ ಮಾಡುತ್ತಿದೆ.

ಜಿಯೊ ಮೊಬೈಲ್ ಬ್ರೌಸರ್ ಸದ್ಯ ಗೂಗಲ್ ಕ್ರೋಮ್, ಸಫಾರಿ, ಫೈರ್ಫಾಕ್ಸ್ ಸೇರಿದಂತೆ ಇತರ ಬ್ರೌಸರ್‌ಗಳಿಗೆ ಪ್ರತಿಸ್ಪರ್ಧಿಯಾಗಿದ್ದು, ಗೌಪ್ಯತೆಯ ವಿಷಯದಲ್ಲಿ ಜಿಯೊ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿದೆ. ಇದು ಶಕ್ತಿಯುತ ಕ್ರೋಮಿಯಂ ಬ್ಲಿಂಕ್ ಎಂಜಿನ್‌ನಲ್ಲಿ ನಿರ್ಮಿಸಲ್ಪಟ್ಟಿದ್ದು, ಇದು ವೇಗವಾದ ಎಂಜಿನ್ , ಅತ್ಯುತ್ತಮ ಇನ್‌ಕ್ಲಾಸ್ ವೆಬ್‌ಪುಟ ರೆಂಡರಿಂಗ್, ವೇಗದ ಪೇಜ್ ಲೋಡ್‌ಗಳು, ದಕ್ಷ ಮೀಡಿಯಾ ಸ್ಟ್ರೀಮಿಂಗ್, ಎಮೋಜಿ ಡೊಮೇನ್ ಬೆಂಬಲ ಮತ್ತು ಎನ್‌ಕ್ರಿಪ್ಟ್ ಮಾಡಿದ ಸಂಪರ್ಕದ ಮೂಲಕ ವರ್ಧಿತ ಬ್ರೌಸಿಂಗ್ ಅನುಭವವನ್ನು ಬಳಕೆದಾರರಿಗೆ ಒದಗಿಸುತ್ತದೆ. ಸದ್ಯ ಇದೀಗ ಜನಸಾಮಾನ್ಯರಿಗೆ ಇನ್ನಷ್ಟು ಹತ್ತಿರವಾಗುವ ಫೀಚರ್ಸ್‌ಗಳ ನ್ನ ಹೊಸ ಆಪ್‌ಡೇಡ್‌ನಲ್ಲಿ ಪರಿಚಯಿಸಿದೆ.

ವಿಶೇಷತೆ: ಜಿಯೊ ಪೇಜಸ್ ಬ್ರೌಸರ್ ತಮಿಳು, ಮರಾಠಿ, ಕನ್ನಡ, ತೆಲುಗು, ಹಿಂದಿ, ಗುಜರಾತಿ, ಬಂಗಾಳಿ ಮತ್ತು ಮಲಯಾಳಿ ಭಾಷೆಗಳಲ್ಲಿ ಬ್ರೌಸ್ ಮಾಡಲು ಅವಕಾಶ ಕಲ್ಪಿಸುತ್ತದೆ. ಇದು ನಿಮ್ಮ ಆದ್ಯತೆಯ ಭಾಷೆಗಳಲ್ಲಿ ಎಲ್ಲಾ ಸ್ಥಳೀಯ, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸುದ್ದಿಗಳನ್ನು ಒದಗಿಸುತ್ತದೆ. ಇದರಲ್ಲಿ ಧ್ವನಿ ಹುಡುಕಾಟದ ಮೂಲಕ ಸೈಟ್‌ಗಳನ್ನು ಬಳಸಬಹುದು. ಜಾಹೀರಾತುಗಳು ಮತ್ತು ಪಾಪ್‌ಅಪ್‌ಗಳನ್ನು ನಿರ್ಬಂಧಿಸಲು ಮತ್ತು ಲ್ಯಾಂಡ್‌ಸ್ಕೇಪ್ ವೀಕ್ಷಣೆಗೆ ಅನುವು ಮಾಡಿಕೊಡುತ್ತದೆ. ■

## ಫೋನ್ ಕಳೆದರೆ ಹೀಗೆ ಮಾಡಿ!

ಸ್ಮಾರ್ಟ್ ಫೋನ್ ಇಲ್ಲದೆಯೇ ಬದುಕು ಸಾಗುವುದೇ ಇಲ್ಲವೇನೋ ಎನ್ನುವಷ್ಟರಟ್ಟಿಗೆ ಅದು ನಮ್ಮನ್ನು ಆವರಿಸಿಕೊಂಡಿದೆ. ಇಂತಹ ಸ್ಮಾರ್ಟ್‌ಫೋನ್ ಕಳೆದುಹೋದರೆ ಏನುಮಾಡೋದು? ಕಳೆದುಹೋದ ಸ್ಮಾರ್ಟ್‌ಫೋನ್ ಸಿಗದೇ ಇಲ್ಲ ಅನ್ನೋ ಮಾತಿದೆ. ಅದರ ಹೊರತಾಗಿಯೂ, ಕಳೆದುಹೋದ ಫೋನ್ ಹುಡುಕಲು ಕೆಲ ಮಾರ್ಗಗಳಿವೆ. ಅದೃಷ್ಟ ಚೆನ್ನಾಗಿದ್ದರೆ ನಿಮ್ಮ ಫೋನ್ ಸಿಗಲೂಬಹುದು. ಬಳಕೆದಾರರ ಕೆಲಸ ಕಾರ್ಯಗಳ ಅವಿಭಾಜ್ಯ ಅಂಗವೇ ಆಗಿರುವ ಸ್ಮಾರ್ಟ್‌ಫೋನ್ ಕಳೆದು ಹೋದರೆ ಎಲ್ಲಿಲ್ಲದ ಟೆನ್ಷನ್ ಶುರುವಾಗುತ್ತೆ. ಪೊಲೀಸ್ ಕಂಪ್ಲೀಟ್ ಕೊಡುವುದಕ್ಕೂ ಮುಂದಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಟೆಕ್ ದೈತ್ಯ ಗೂಗಲ್ ನೆರವಿಗೆ ಬರಲಿದ್ದು, ಕಳೆದುಹೋದ ಸ್ಮಾರ್ಟ್‌ಫೋನ್‌ನ ಲೊಕೇಷನ್ ಟ್ರ್ಯಾಕ್ ಮಾಡಲು ಗೂಗಲ್ ಸಹಾಯ ಮಾಡುತ್ತದೆ.




### ಸ್ಮಾರ್ಟ್‌ಫೋನ್ ರಿಕವರಿ ಹೇಗೆ?

- ಸಹಜವಾಗಿ ಸ್ಮಾರ್ಟ್‌ಫೋನ್‌ಗೆ ನಿಮ್ಮ ಮೇಲ್ ಐಡಿಯನ್ನು ಲಿಂಕ್ ಮಾಡಿಯೇ ಇರುತ್ತೀರಿ. ಫೋನ್ ಕಳೆದುಹೋದ ಸಂದರ್ಭದಲ್ಲಿ ನಿಮ್ಮದೇ ಮತ್ತೊಂದು ಫೋನ್ ಅಥವಾ ನಿಮ್ಮ ಸ್ನೇಹಿತರ ಫೋನ್‌ನಲ್ಲಿ ಮೇಲ್ ಐಡಿಗೆ ಲಾಗಿನ್ ಆಗಿ.
- ನಂತರ ಸೆಕ್ಯುರಿಟಿ ಆಯ್ಕೆಯನ್ನು ಸೆಲೆಕ್ಟ್ ಮಾಡಿರಿ.
- ಯೂವರ್ ಡಿವೈಸ್ ಆಯ್ಕೆಯಲ್ಲಿ ಫೈಂಡ್ ಲಾಸ್ಟ್ ಫೋನ್ ಆಯ್ಕೆಯನ್ನು ಕ್ಲಿಕ್ ಮಾಡಿ.
- ಈಗ ನಿಮ್ಮ ಕಳೆದು ಹೋದ ಫೋನ್ ಹತ್ತಿರದ ಲೊಕೇಷನ್‌ನಲ್ಲಿ ಇದ್ದರೆ ಗ್ರೀನ್ ಲೈಟ್ ತೋರಿಸುತ್ತದೆ. ಅನ್‌ನೌನ್ ಲೊಕೇಷನ್ ಆಗಿದ್ದರೇ ಗ್ರೇ ಬಣ್ಣ ತೋರಿಸುತ್ತದೆ. ನಿಮ್ಮ ಅದೃಷ್ಟ ಚೆನ್ನಾಗಿದ್ದರೆ ಆ ಹತ್ತಿರದ ಲೋಕೇಷನ್‌ಗೆ ಹೋಗಿ ಫೋನ್ ಹುಡುಕಿ ಪಡೆಯಬಹುದು.
- ಅಲ್ಲದೇ ಇನ್ನು ನಿಮ್ಮ ಫೋನ್ ಲೊಕೇಷನ್ ಹತ್ತಿರವೇ ಇದ್ದಾಗ 'ಪ್ಲೇ ಸೌಂಡ್' ಆಯ್ಕೆ ಕ್ಲಿಕ್ ಮಾಡಿ. ಆಗ ಫೋನ್ ಸೈಲೆಂಟ್ ಮೋಡ್‌ನಲ್ಲಿದ್ದರೂ ರಿಂಗ್ ಆಗುತ್ತದೆ. ಈ ಮೂಲಕ ನಿಮ್ಮ ಕಳೆದುಹೋದ ಸ್ಮಾರ್ಟ್‌ಫೋನ್ ಅನ್ನು ಹುಡುಕಬಹುದು. ಇದಲ್ಲದೆ ನಿಮ್ಮ ಕಳೆದು ಹೋದ ಸ್ಮಾರ್ಟ್‌ಫೋನ್‌ನಲ್ಲಿರುವ ಮಾಹಿತಿಯನ್ನು ಸಹ ರಕ್ಷಿಸಬಹುದಾಗಿದೆ. ಗೂಗಲ್ ಅಕೌಂಟ್ ಮೂಲಕ ಗೂಗಲ್ ಸೆಕ್ಯುರ್ ಡಿವೈಸ್ ಕಳೆದುಹೋದ ಫೋನಿನಲ್ಲಿರುವ ಮಾಹಿತಿಯ ಸುರಕ್ಷತೆಗಾಗಿ ಫೋನ್ ಅನ್ನು ಲಾಕ್ ಮಾಡಬಹುದಾಗಿದೆ. ಇದಲ್ಲದೆ ಗೂಗಲ್ ಮೂಲಕ ಫೋನ್ ಟ್ರ್ಯಾಕ್ ಮಾಡಲು 'ಗೂಗಲ್ ಫೈಂಡ್ ಮೈ ಡಿವೈಸ್ ಆ್ಯಪ್' ಅನ್ನು ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದು. ■